Doc-5(1) G-P-2

(1)

Reg no KKGN 12 - For Influential Publicity - 30-9-76

ಸತ್ಯವಾದಿ
SATYAVADI

60th Diamond Jubilee Year
೬೦ನೇ ವಜ್ರಮಹೋತ್ಸವ ವರ್ಷ
★ Satyavadi Daily, Mysore 4 ★

ಸ್ಥಾಪಕರು : ಅರಮನೆ ಸರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣಂಎವ್ 15 ಪೈಸೆ

ಬೊಂಬೆಗಳ ಶವಸಂಸ್ಕಾರ

ಟೋಕಿಯೋ— ಹಲವಾರು ಚಿಕ್ಕಮಕ್ಕಳು ತಮ್ಮ ಹರಕು ಉಡುಪಿನ ಮತ್ತು ಮುರುಕು ಬೊಂಬೆಗಳನ್ನು ಶನಿವಾರ ಕೆಲೋವ ಜು ದೇವಾಲಕ್ಕೆ ನಾ ಷ ಕ ಬೌದ್ಧ ಪವಾರಂಭಕ್ಕೆ, ತಮ್ಮ ಈ ಹಳೇ ಆಟದ ಸಾಮಾನುಗಳಿಗೆ ನಿರ್ವಾಣ ದೊರ ಕಿಸಲು ತಂದಿದ್ದರು – ಬೊಂಬೆಗಳ ಶವಸಂಸಾ ರವು ಇಲ್ಲಿಯ ಒಂದು ವರ್ಣರಂಜಿತ ಪವಾರಂಭವಾಗಿದ್ದು ಪೂಜಾರಿಗಳು ಬೊಂಬೆಗಳ ರಾಶಿಗೆ ಸಾಂಕೇತಿಕವಾಗಿ ಶವಸಂ ಸ್ಕಾರನಡೆಸುವರು – ಮಕ್ಕಳು ಬೇಕಾದ ಯೌವನಸ್ಥರೂ, ತಮ್ಮ ಮಕ್ಕಳಿಗೆ ಒಳ್ಳೇ ಆರೋಗ್ಯ ಇಚ್ಛಿಸುವ ತಂದೆತಾಯಿಗಳೂ ದೇವಾಲಯಕ್ಕೆ ಬರುವರು – ಪಾಪಕ್ಷಯಕವಾಗಿ " ಮಕ್ಕಳನ್ನು ಬೆಳೆಸುವ ಕರುಣಾ ದೇವತೆಗೆ " ತಮ್ಮ ಕೃತಜ್ಞತೆಗಾಗಿ ಬೊಂಬೆಗಳನ್ನು ಅರ್ಪಿಸುವರು.

★

ಗಾಂಧಿ ಜಯಂತಿಯಂದು ಮಾಂಸ ಮಾರಾಟವಿಲ್ಲ

ಮೈಸೂರು— ಅಕ್ಟೋಬರು 2 ರಂದು ಮಹಾತ್ಮಾ ಗಾಂಧಿ ಜಯಂತಿ ಪ್ರಯುಕ್ತ ಕೆಸರೆಯಲ್ಲಿಯೆ ವುನಿಸಿಪಲ್ ಕೆರಿ ಮತ್ತು ಅಡುಗಳ ವಧಾಗೃಹಕ್ಕೆ ರಜ ವಿದೆ – ಮೈಸೂರು ನಗರ ಭಾಗದಲ್ಲಿ ಎಲ್ಲಾ ಮುನಿಸಿಪಲ್ ಮಾರುಕಟ್ಟೆಗಳು ಮತ್ತು ಖಾಸಗಿ ಮಾರಾಟಗಾರರು ಮಾಂಸ ಮಾರಾವುದು ಪ್ರತಿಬಂಧಿಸಲ್ಪಟ್ಟಿದೆ.

★

ನಿಕ್ಸನ್ನ ಮೇಲೆ ಮೊಖದ್ದಮೆ

ವಾಷಿಂಗ್ಟನ್— ಮಾಜಿ ಅಧ್ಯಕ್ಷ ನಿಕ್ಸನ್ ಮತ್ತು ಅವರ ಸಹಾಯಕರ ಮೇಲೆ ಪತ್ರಿಕೆಗಳಿಗೆ ಬರೆಯುವ ಜಾಕ್ ಅಂಡರ್ಸನ್‌ರು ತನುಗೆ ಅಪಖ್ಯಾತಿತರುವ ಮತ್ತು ತನ್ನನ್ನು ಕೊಲೆ ಮಾಡುವ ಸಾಧ್ಯತೆ ಬಗ್ಗೆ ಪಿತೂರಿ ನಡೆಸಿದ ಅಪಾದನೆಗಾಗಿ 22 ಮಿಲಿಯ ಡಾಲರುಗಳ ಮೊಖದ್ದಮೆ ಹೂಡಿರುವರು.

○

ಪ್ರವಾಸಿಗರ ಆಕರ್ಷಣೆಗಾಗಿ

ನವದೆಹಲಿ— ವಿದೇಶೀ ಪ್ರವಾಸಿಕರ ಆಕರ್ಷಣೆಗಾಗಿ, ರಾಜಸ್ಥಾನದಲ್ಲಿ, ನವಿಲುಗಳ ತೋಟ, ಒಂಟೆ ಜೂಜು, ಆನೆ ಪೋಲೊ ಮುತಾದುವುಗಳನ್ನು ಏರ್ಪಡಿಸಲು ಯೋಜಿಸಲಾಗಿದೆ.

★

ದಿವ್ಯವಾಣಿ

ಪುರುಷರು ಅಯಾಸಗೊಂಡಿರುವುದರಿಂದ ವಿವಾಹವಾಗುವರು ; ಮಹಿಳೆಯರು ಕುತೂಹಲದಿಂದ ವಿವಾಹವಾಗುವರು ; ಇಬ್ಬರು ನಿರಾಕ್ಷೆಗೊಳ್ಳುವರು
— ಆಸ್ಕರ್ ವೈಲ್ಡ್

●

ಟೋಕಿಯೋ — 23 ದಿನಗಳ ಹಿಂದೆ ಉತ್ತರ ಜಪಾನಿನಲ್ಲಿ ರಷ್ಯ ಹಾಕಿದ ಇಳಿದ ಂಐಜಿ ವಿಮಾನವನ್ನು ರಷ್ಯಕ್ಕೆ ಕೊಡುವ ಭರವಸೆ ನೀಡಲಾಗಿದೆ.

ಸೆನೇಟಿನ ಒಪ್ಪಿಗೆ

ವಾಷಿಂಗ್ಟನ್ — ಅಮೇರಿಕ ಸೆನೇಟು ಐನೂರುಒಂದು ಬಿಲಿಯ ಡಾಲರು ವಿದೇಶಿ ನೆರವಿನ ಮಸೂದೆಯನ್ನು ಒಪ್ಪಿದೆ ಇದರಲ್ಲಿ ಮೂರನೆಯ ಒಂದು ಭಾಗ ಇಸ್ರೇಲಿಗೆ ಹೋಗುವುದು.

★

ಗ್ರೋಮಿಕೊ ಸೂಚನೆ

ನ್ಯೂಯಾರ್ಕ್ — ಪ್ರಪಂಚದಲ್ಲಿ ತೊಡಕುಗಳಿಗೂ ಘರ್ಷಣೆಗಳಿಗೂ ಪ್ರಧಾನ ಕಾರಣವಾಗಿರುವ ವಿದೇಶಗಳಲ್ಲಿಯ ಸೈನ್ಯ ಸೇನೆ ಠಾಣೆಗಳನ್ನು ತೆಗೆದುಹಾಕಬೇಕೆಂದು ರಷ್ಯ ವಿದೇಶ ಮಂತ್ರಿ ಅಂಡ್ರಿಗ್ರೋಮಿಕೊ ತಿಳಿಸಿದ್ದಾರೆ.

●

ಹೊಟ್ಟೆಯಲ್ಲಿ ಭಂಗಾರ

ಸಾನು ಎಂಬ ಓರ್ವ ಕಲ್ಲಿಕೋಟೆಯ ಸರಾಫ್ ವ್ಯಾಪಾರಿಯ ಹೊಟ್ಟೆಯಲ್ಲಿ 52 ಗ್ರಾಂಗಳ ಭಂಗಾರ ಇದ್ದುದು ಕ್ಷಕಿರಣದಿಂದ ಹೊರಪಟ್ಟಿದೆ ಆತನಿಗೆ ಹೆಚ್ಚಾಗಿ ವಯಸ್ಸಾಗಿರುವುದರಿಂದ ಶಸ್ತ್ರ ಚಿಕಿತ್ಸೆ ಮಾಡಲಾಗುವುದಿಲ್ಲ ಅದರ ಸಮಾನ ಭಂಗಾರವನ್ನು ಆತನ ಅಂಗಡಿಯಿಂದ ವಶ ಪಡಿಸಿಕೊಳ್ಳಲಾಗುವುದು

★

ಸಮಿತಿಗಳು ಬೇಡ

ನವದೆಹಲಿ — ನವೆಂಬರಿನಲ್ಲಿ ಬರುವ ತಮ್ಮ ಹುಟ್ಟು ಹಬ್ಬ ಆಚರಿಸಲು ಯಾವ ಸಮಿತಿಯೂ ಕೂಡದೆಂದು ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರು ತಿಳಿಸಿದ್ದಾರೆ.

★

ಮುಳುಗಿ ಸಾವು

ಮೈಸೂರು — ಜೀವನದಲ್ಲಿ ಬೇಸರ ಗೊಂಡು ಅರುಂಧತಿ ಮತ್ತು ಆಕೆ ತಂಗಿ ವೀಣಾ ಕುಕ್ಕರಹಳ್ಳಿ ಕೆರೆಯಲ್ಲಿ ಮುಳುಗಿ ಸತ್ತರು

ಪ್ರಧಾನರೊಡನೆ ಸಂದರ್ಶನ

ನವದೆಹಲಿ — ಲಂಡನ್ ಡೇಲಿ ಟೆಲಿಗ್ರಾಫ್‌ನ ಮಿಸ್ ಅನ್‌ರೊಡನೆ ಇತ್ತ ಸಂದರ್ಶನದಲ್ಲಿ ಪ್ರಧಾನಿ ಇಂದಿರಾರವರು ಚುನಾವಣೆಯನ್ನು ತಪ್ಪಿಸಿಕೊಳ್ಳಲು ತಾವು ಇಚ್ಛೆಪಡುವುದಿಲ್ಲ ಎಂದು, ಆದರೆ ಸರ್ಕಾರ ಸಕಾಲದಲ್ಲಿ ನಿರ್ಧರಿಸಿ ಸರಿಯಾದ ಸ್ಥಳದಲ್ಲಿ ಸಕಾಲದಲ್ಲಿ ಕ್ರಮಕೈಗೊಳ್ಳಬೇಕಾಗಿದೆ ಎಂದು ತಿಳಿಸಿದರು.

●

ಯಾಹ್ಯರ ಕರೆ

ಮೈಸೂರು — ಪ್ರಾದೇಶಿಕ ಭಾಷೆ ವಿದ್ಯೆ, ಸಂಸ್ಕೃತಿ ಮತ್ತು ಆಡಳಿತಗಳಲ್ಲಿ ಸೂಕ್ತವಾದ ಸ್ಥಾನ ಹೊಂದಿರಬೇಕೆಂದು ಶಿಕ್ಷಣ ಮಂತ್ರಿ ಶ್ರೀ ಯಹ್ಯಾಹ್ಯರು ಅಧ್ಯಕ್ಷತೆ ವಹಿಸಿದ್ದ ದಕ್ಷಿಣ ರಾಜ್ಯಗಳ ಅಧಿಕೃತ ಭಾಷೆಗಳ ಸೆಮಿನಾರ್‌ನಲ್ಲಿ ತಿಳಿಸಿದರು.

○

ತುಲಾ ಸಂಕ್ರಮಣ

ಮಡಕ್ಕೇರಿ — ಕಾವೇರಿ ತುಲಾ ಸಂಕ್ರಮಣವು ಅಕ್ಟೋಬರು 17 ರಂದು ಆಗಿದ್ದು ಬೆಳಿಗ್ಗೆ 8 ಗಂಟೆಗೆ ತೀರ್ಥೋದ್ಭವ ಆಗುವದು

○

ಪುರಸಭಾಧ್ಯಕ್ಷರ ಮನೆ ಮುಂದೆ ಗಲಭೆ

ನ್ಯೂಯಾರ್ಕ್ — ಕೆಲವಾರು ನೂರು ಪೋಲೀಸರು ವೇತನ ಹಾಗೂ ಹೆಚ್ಚು ಗಂಟೆ ಕೆಲಸ ಬಗೆಹರಿಸು ಪುರಸಭಾಧ್ಯಕ್ಷ ಏ ಬ್ರಾಹಿಂ ಬೀಂರವರ ಮನೆ ಮುಂದೆ ಗಲಭೆ ಮಾಡುತ್ತಿರುವರು

○

ಕರ್ನಾಟಕಕ್ಕೆ ಹಡಗು

ಬೆಂಗಳೂರು — ಕರ್ನಾಟಕ 3 ವರ್ಷಗಳಲ್ಲಿ ಕಡೆಯ ಪಕ್ಷ 6 ಹಡಗುಗಳನ್ನು ಪಡೆಯಲು ಕರ್ನಾಟಕ ಹಡಗು ಸಂಸ್ಥೆ ಯೋಜಿಸಿರುವುದಾಗಿ ಅದರ ಮೇನೇಜಿಂಗ್ ಡೈರೆಕ್ಟರ್ ತಿಳಿಸಿದ್ದಾರೆ.

10 ವರ್ಷ ವೋಟಿಂಗ್ ಹಕ್ಕನ್ನು ಕಳೆದುಕೊಂಡ

ರೋಂ— ಇಟಲಿಯ ಖ್ಯಾತ ಸಿನಿಮಾ ಡೈರೆಕ್ಟರ್ ಬರ್ನಾಡೋರವರ " ಲಾ ಸ್ಟ್ ಟೊಂಗೊ ಇನ್ ಪ್ಯಾರಿಸ್ " ಚಿತ್ರವು ರಾಷ್ಟ್ರೀಯ ಸಾಮಾಜಿಕ ವಿರುದ್ಧ ಎಂಬ ಅಪರಾಧಕ್ಕಾಗಿ. 10 ವರ್ಷ ಕಾಲ ವೋಟಿಂಗ್ ಹಕ್ಕನ್ನು ಕಳೆದುಕೊಂಡರು.

ಲೈಸೆನ್ಸು ಪಡೆಯಬೇಕು

ಹೈದರಾಬಾದು— ಕಡಲೆಕಾಯಿಎಣ್ಣೆ ವ್ಯಾಪಾರಿಗಳೂ, ಉತ್ಪಾದಕರೂ ಲೈಸೆನ್ಸು ಪಡೆಯಬೇಕೆಂದು ಆಜ್ಞೆ ಮಾಡಲಾಗಿದೆ.

MYSORE RACES 1976

FRIDAY 1 st October

[The Governor's Gold Cup]

– Carried over Jackpot added attraction –

SATURDAY 2nd October

ವುಡ್‌ಲಾಂಡ್ 1 10 76 ರಿಂದ

ಅಮೋಘ 2ನೇ ವಾರ

ರಂಗೀಲಾ ರತನ್

ಹಿಂದಿ

ಕಲರ್

ರಿಷಿಕಪೂರ್ ಬಿಂದಿಯಾ ಬಾಬಿ ಅಶೋಕಕುಮಾರ್ ಅಜಿತ್ ಅಭಿನಯ

ದಿನ 3 ಪ್ರದರ್ಶನಗಳು

ಅಪೇರಾ 17 9 76 ರಿಂದ

ವಿಜಯವಾಣಿ

ಶ್ರೀನಾಥ್ ಕಲ್ಪನ ದ್ವಾರಕೀಶ್ ರಾಜಶಂಕರ್ ಅಭಿನಯ

ಕನ್ನಡ ಪ್ರತಿ ದಿನ 3 ಪ್ರದರ್ಶನಗಳು

Rugs, Sweaters & Kashmir Coats

ರಗ್ಸು, ಸ್ವೆಟರು, ಕಾಶ್ಮೀರ್ ಕೋಟುಗಳಿಗೆ

ಬ್ಯಾಂಕ್ ರೋಡ್ ಇಹುಸಾರ್

A Fair Priec Shop in Actual Practice

ನಗರಾಭಿವೃದ್ಧಿ ಪರಿಷತ್, ಮೈಸೂರು

ಪ್ರಕಟಣೆ

ದಿ 25-9-1976

ವರ್ಣರಂಜಿತ ಸಾಂಸ್ಕೃತಿಕ ಟಾರ್ಚ್ ಲೈಟ್ ಪೆರೇಡ್ ಬನ್ನಿಮಂಟಪ ಮೈದಾನ, ಮೈಸೂರು ಇಲ್ಲಿ 3-10-1976 ರ ಸಂಜೆ 6 ಗಂಟೆಗೆ ಏರ್ಪಡಿಸಿದೆ.

ಪ್ರವೇಶ ದರ : ರೂ 25 10, 5 ಮತ್ತು 1

ಬೆಳಿಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆ ವರೆಗೆ ಈ ಕೆಳಗಿನ ಕೇಂದ್ರಗಳಲ್ಲಿ 29-9-1976 ರಿಂದ ಟಿಕೆಟ್‌ಗಳು ದೊರೆಯುವುವು

1 ಸಿಐಟಿಬಿ ಕಚೇರಿ, ಮೈಸೂರು 2 ನಗರ ಪುರಸಭೆ, ಮೈಸೂರು, 3 ಕೆಎಸ್ಆರ್‌ಟಿಸಿ ಬಸ್ ಸ್ಟ್ಯಾಂಡ್ (ಕೆಆರ್ ಸರ್ಕಲ್) 4 ಕರ್ಜನ್ ಪಾರ್ಕ್ ಪಕ್ಕ ಅರಮನೆ ಹತ್ತಿರ 5 ಮಾಡರ್ನ್ ಹಿಂದೂ ಹೋಟೆಲ್‌ನಲ್ಲಿರುವ ಪ್ರವಾಸೋದ್ಯಮ ಇಲಾಖೆ 6 ಬನ್ನಿಮಂಟಪ ಮತ್ತು 7 ವ್ಯಾಯಾಮಶಾಲೆಯ ಪ್ರದೇಶಗಳ ಹತ್ತಿರ 8 ವಸ್ತುಪ್ರದರ್ಶನ ಮೈದಾನ (5 ರಿಂದ ರಾತ್ರಿ 8)

ಸೂಚನೆ : ಪೆರೇಡ್ ದಿನ ಬನ್ನಿಮಂಟಪ ಮೈದಾನದಲ್ಲಿ ಬೆಳಿಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆ ವರೆಗೆ ಟಿಕೆಟ್ ಗಳು ಮಾರಲ್ಪಡುವುವು

(ಬಿ. ಎನ್. ಕೆಂಪೇಗೌಡ) ಅಧ್ಯಕ್ಷರು.

ಕರ್ನಾಟಕ ಲೋಕೋಪಯೋಗಿ ಇಲಾಖೆ ಎರಡನೆ ಕಾಲ್

ಸಂಕ್ಷಿಪ್ತ ಟೆಂಡರ್ ಪ್ರಕಟಣೆ

ನಂ 21 ತಾ 14-9-1976 (ಹರಾಜು ಮಾರಾಟ ಪ್ರಕಟಣೆ)

ಈ ಮೂಲಕ ಸಾರ್ವಜನಿಕರ ತಿಳಿವಳಿಕೆಗಾಗಿ ಪ್ರಕಟಿಸುವುದೇನೆಂದರೆ, ಈ ಕೆಳಗೆ ಸೂಚಿಸಿರುವ ಉಪಯೋಗಕ್ಕೆ ಬರದ ಮೆಷನರಿಯನ್ನು 19-10-1976 ರಂದು ಹೆಗ್ಗಡದೇವನಕೋಟೆ ತಾಲ್ಲೂಕು ಕಬಿನಿ ಕಾಲನಿಯ ಓ ಅಂಡ್ ಎಂ ಸಬ್-ಡಿವಿಜನ್‌ನ್ನಿನ ವರ್ಕ್‌ಷಾಪ್ ಪ್ರದೇಶದಲ್ಲಿ ಇರುವ ಪರಿಸ್ಥಿತಿಯಲ್ಲಿ ಬಹಿರಂಗ ಹರಾಜಿನಲ್ಲಿ ಮಾರಲ್ಪಡುವುದು ಬಹಿರಂಗ ಮಾರಾಟ ಪ್ರಾರಂಭವಾಗುವ ಮೊದಲು ಅಪೇಕ್ಷಿಸುವ ಬಿಡ್ದಾರರು ಅನ್ಸೆಸ್ಟ್ ಹಣ ಠೇವಣಿಯನ್ನು ಠೇವಣಿ ಮಾಡಬೇಕು

ಐಟಂ ನಂ	ಮೆಷಿನರಿ ಹೆಸರು	ಬುಕ್ ಮೌಲ್ಯ	ಠೇವಣಿ 2½ ಇಎಂಡಿ ಠೇವಣಿ
1	ಫೋರ್ಡ್ ಎಂಪೈಎಸ್ 5158 ಕೆಎಂಡಿ ಡಾಡ್ಜ್ 2 ಟ್ರಾಕ್ಟರ್ ಮತ್ತು ಟ್ರೈಲರ್	15043	376-00
	ಎಂಪೈಎನ್ 3248 ಮತ್ತು ಎಂಪೈಎನ್ 3249 ಟೂಬರ್ ಫಾರ್ವರ್ಡ್ 'ಎ' ಇಂಟರ್ನ್ಯಾಷನಲ್ ಹಾರ್ವೆಸ್ಟರ್.	3210	80-00

ವಿವರವಾದ ಷರತ್ತುಗಳು ಮತ್ತು ಇತರ ವಿವರಗಳು ಯಾವುದಾದರೂ ಬೇಕಾದರೆ ಈ ಕೆಳಗೆ ಸಹಿ ಮಾಡಿರುವವರಿಂದ ಪಡೆಯಬಹುದು

ಸಹಿ/- ಎಕ್ಸಿಕ್ಯೂಟೀವ್ ಇಂಜಿನಿಯರ್,
ಕಬಿನಿ ಜಲಾಶಯ ವಿಭಾಗ, ಕಬಿನಿ ಕಾಲೋನಿ

Protect the Cow

Edited Printed and Published by Dharmaprachaaranirata M S. Krishna Rao (Proprietor) at the Satyavadi Press. Chamarajapuram Mysore 4